ಸಿ.ಸಿ. ನಂ. *3613/2023*

ಪಿ.ಡಬ್ಲು-*5*

ಸಾಕ್ಷಿಯನ್ನು ಇಂದು ದಿನಾಂಕಃ *11.03.2025* ರಂದು ಪುನಃ ಕರೆಯಿಸಿ ಪ್ರಮಾಣಿಕರಿಸಲಾಯಿತು.

<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಎಸ್.ಎಸ್.ಸಿ. ವಕೀಲರಿಂದ</u>

ನಾವು ಯಾವ ಸ.ನಂ. ನ ಜಮೀನಿನಲ್ಲಿ ಜೋಳ ಕಿತ್ತಬೇಡಿ ಎಂದು ಆರೋಪಿತರಿಗೆ ಹೇಳಿರುತ್ತೇವೆ, ಆ ಸ.ನಂ. ನನಗೆ ಹೇಳಲು ಬರುವುದಿಲ್ಲ. ಆರೋಪಿತರ ಕಬ್ಜಾದಲ್ಲಿ ನಮ್ಮ ಜಮೀನು ನಮ್ಮ ಕಬ್ಜಾದಲ್ಲಿ ಆರೋಪಿತರ ಜಮೀನು ಇದೆ ಎಂದು ಹೇಳುತ್ತಿರಲ್ಲ, ಅವುಗಳ ಸ.ನಂ. ನನಗೆ ಹೇಳಲು ಬರುತ್ತದೆಯಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಾನು ನನ್ನ ಹೇಳಿಕೆಯಲ್ಲಿ ಆರೋಪಿತರ ಕಬ್ಜಾದಲ್ಲಿ 5 ಎಕರೆ ನಮ್ಮ ಜಮೀನು, ನಮ್ಮ ಕಬ್ಜಾದಲ್ಲಿ ಆರೋಪಿತರ 8 ಎಕರೆ ಜಮೀನು ನಮ್ಮ ಕಬ್ಜಾದಲ್ಲಿ ಇರುತ್ತದೆ ಎಂದು ಹೇಳಿ ಬರೆಸಿರುತ್ತೇನೆ. ನಾನು ನನ್ನ ಹೇಳಿಕೆಯಲ್ಲಿ ಪೋಲಿಸರಿಗೆ ನಮ್ಮ ಕಬ್ಜಾದಲ್ಲಿರುವ ಜಮೀನು ಬೀಳಾ ಬಿದ್ದಿರುತ್ತದೆ ಅದೇ ರೀತಿ ನಿಮ್ಮ ಕಬ್ಜಾದಲ್ಲಿರುವ ಜಮೀನನ್ನು ಬಿತ್ತು ಬೆಳೆ ಮಾಡಬೇಡಿ ಎಂದು ಹೇಳಿ ಬರೆಸಿರುತ್ತೇನೆ. ಕಬ್ಜಾ ಅದಲಿ ಬದಲಿ ಆದ ಕಾರಣ ಈ ಪ್ರಕರಣ ದಾಖಲಿಸಿದ್ದೀರಾ ಎಂಧರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಮ್ಮ ಕುಟುಂಬದ ಒಟ್ಟು 12 ಎ-20 ಗುಂಟೆ ಜಮೀನಿನಲ್ಲಿ ಚಂದಮ್ಮನ ಹೆಸರಿನಲ್ಲಿರುವ 4 ಎಕರೆ ಜಮೀನನ್ನು ಬಿಟ್ಟು ಎಲ್ಲಾ ಜಮೀನನ್ನು ಮಾರಾಟ ಮಾಡಿರುತ್ತೇವೆ ಎಂಧರೆ ಸರಿ. ಆರೋಪಿತರು ಯಾವ ದಿನ ತಕರಾರು ಮಾಡಿರುತ್ತಾರೆ ಎಂದು ಹೇಳುತ್ತಿರಲ್ಲ, ಅದೇ ದಿನ ಹೋಗಿ ಫಿರ್ಯಾದಿ ಸಲ್ಲಿಸಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಚಾಸಾ-೧ ರವರನ್ನು ಹೊಡೆದಿದ್ದಾರೆ ಎಂದು ಹೇಳುತ್ತಿರಲ್ಲ, ಯಾರು ಹೊಡೆದಿದ್ದಾರೆ ಎಂದರೆ ಸಾಕ್ಷಿಯು ಆರೋಪಿತರೆಲ್ಲರೂ ಸೇರಿ ಹೊಡೆದಿರುತ್ತಾರೆ, ಮುಂದುವರೆದು ಅವರ ಬೀಗರು ಹೊಡೆದಿರುತ್ತಾರೆ, ಆದರೆ ಅವರ ಹೆಸರು ನಮಗೆ ಗೊತ್ತಿಲ್ಲ ಎಂಧು ನುಡಿಯುತ್ತಾರೆ. ಪೊಲಿಸರ ಮುಂದೆ ಆರೋಪಿತರೆಲ್ಲರೂ ಮತ್ತು ಅವರ ಬೀಗರು ಸೇರಿ ಚಾಸಾ-೧ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದು ಹೇಳಿಕೆ ನೀಡಿರುತ್ತೇನೆ. ಆರೋಪಿ ನಂ.೨ ಚಾಸಾ-೧ ರವರನ್ನು ಬಗ್ಗಿಸಿ ಹೊಡೆದಿರುತ್ತಾರೆ, ಆರೋಪಿ ನಂ.೬ ಚಾಸಾ-೬ ರವರಿಗೆ ಹೊಡೆದಿರುತ್ತಾನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂಧರೆ ಸರಿ ಅಲ್ಲ. ಆರೋಪಿ ನಂ.೩ ರಿಂದ ೫ ರವರು ಚಾಸಾ-೪ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೪ ರವರ ಹಲ್ಲು

ಉದುರಿದೆ ಎಂದು ಹೇಳುತ್ತಿರಲ್ಲ, ಎಷ್ಟು ಹಲ್ಲು ಉದುರಿದೆ ಎಂದರೆ ಸಾಕ್ಷಿ ಒಂದು ಹಲ್ಲು ಉದುರಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ-೪ ರವರ ಹಲ್ಲು ಹೊಡೆದ ತಕ್ಷಣ ಬಿದ್ದಿರುತ್ತದೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿ ಬರೆಸಿರುತ್ತೇನೆ. ಹಲ್ಲು ಬಿದ್ದಿರುತ್ತದೆ ಎಂದು ಹೇಳುತ್ತಿರಲ್ಲ, ಆಗ ರಕ್ತ ಬಂದಿರುತ್ತದೆಯಾ ಎಂಧರೆ ಸಾಕ್ಷಿ ಸ್ವಲ್ಪ ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ರಕ್ತ ಬಟ್ಟೆಯ ಮೇಲೆ ಬಿದ್ದಿರುತ್ತದೆಯಾ ಎಂದರೆ ಸಾಕ್ಷಿ ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ.

ಸದರಿ ಘಟನೆಯು ಅರ್ಧ ಗಂಟೆ ನಡೆದಿರುತ್ತದೆ. ಸದರಿ ಘಟನೆ ನಡೆದಾಗ ಬಹಳ ಜನ ಕೂಡಿದ್ದರು. ಎಷ್ಟು ಜನರು ಕೂಡಿದ್ದರು ಎಂದು ನನಗೆ ಹೇಳಲು ಬರುವುದಿಲ್ಲ, ಮಾನೆ ಗುಂಡಪ್ಪ, ಕಮಲಾಬಾಯಿ, ಲಕ್ಷ್ಮಿಕಾಂತ ಮತ್ತು ಇನ್ನಿತರರು ಇದ್ದರು ಎಂದು ನುಡಿಯುತ್ತಾರೆ. ಸದರಿ ಘಟನೆಯನ್ನು ನಿಮ್ಮ ಮಗಳು ಮೊಬೈಲನಲ್ಲಿ ರೆಕಾರ್ಡ ಮಾಡಿಕೊಂಡು ಹೇಳುತ್ತಿರಲ್ಲ, ಸದರಿ ಮೊಬೈಲನ್ನು ಪೋಲಿಸರು ಜಪ್ತಿಪಡಿಸಿಕೊಂಡರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಘಟನೆ ನಂತರ ನಾನು, ಚಾಸಾ-೧, ಚಾಸಾ-೪, ಚಾಸಾ-೬ ರವರು ಪೋಲಿಸ್ ಠಾಣೆಗೆ ಹೋಗಿರುತ್ತೇವೆ. ಪೋಲಿಸರು ಘಟನೆ ದಿನದಂದೇ ನಮ್ಮ ಹೇಳಿಕೆಯನ್ನು ನಮ್ಮ ಮನೆಯಲ್ಲಿ ತೆಗೆದುಕೊಂಡಿರುತ್ತಾರೆ. ಫಿರ್ಯಾದಿ ಸಲ್ಲಿಸಿದ ನಂತರ ನಾವು ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ.

ಆರೋಪಿತರು ಹೊಲದ ಜಗಳವಿದ್ದ ಕಾರಣ ನಮ್ಮ ಮೇಲೆ ಎರಡು ಪ್ರಕರಣಗಳನ್ನು ದಾಖಲಿಸಿದ್ದಾರೆ ಎಂಧರೆ ಸರಿ. ಆರೋಪಿತರು ನಮ್ಮನ್ನು ಯಾವತ್ತು ಹೊಡೆ ಬಡೆ ಮಾಡಿರುವುದಿಲ್ಲ, ನಾವೇ ಆರೊಪಿತರನ್ನು ಹೊಡೆದು ಖೊಟ್ಟಿ ಪ್ರಕರಣವನ್ನು ದಾಖಲಿಸಿರುತ್ತೇವೆ ಎಂಧರೆ ಸರಿ ಅಲ್ಲ. ಪೋಲಿಸರೊಂದಿಗೆ ಮಿಲಾಪಿಯಾಗಿ ಆರೋಪಿತರ ಪ್ರಕರಣವನ್ನು ತೆಗೆದುಕೊಳ್ಳದ ಹಾಗೆ ಮಾಡಿರುತ್ತೇವೆ ಎಂದರೆ ಸರಿ ಅಲ್ಲ. ಆರೋಪಿತರ ಆಸ್ತಿಯನ್ನು ಹೊಡೆದುಕೊಳ್ಳಬೇಕೆಂಬ ಉದ್ದೇಶದಿಂದ ಚಾಸಾ-೧ ರವರು ಖೊಟ್ಟಿಯಾಗಿ ಫಿರ್ಯಾದಿಯನ್ನು ಸಲ್ಲಿಸಿರುತ್ತಾರೆ, ಅದಕ್ಕೆ ಪೂರಕವಾಗಲಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಮ್ಮ ಎಲ್ಲಾ ಆಸ್ತಿಯನ್ನು ಮಾರಾಟ ಮಾಡಿ ಆರೋಪಿತರ ಆಸ್ತಿಯನ್ನು ಪಡೆದುಕೊಳ್ಳಬೇಕು ಎಂದು ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ದಿ.27.03.2023 ರಂದು ಜೋಳ ಕೀಳುತ್ತಿರುವ ಸಮಯದಲ್ಲಿ ನಾವು ಆರೋಪಿತರಿಗೆ ಹೋಗಿ ಜೋಳ ಕೀಳಬೇಡಿ ಎಂದು ಚಾಸಾ-೧ ರವರು ಹೇಳಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಮ್ಮ ಹೆಸರಿನಲ್ಲಿರುವ ಜಮೀನು ಕ್ಷೇತ್ರ 5 ಎಕರೆ ಆರೋಪಿತರ ಕಬ್ಜಾದಲ್ಲಿರುತ್ತದೆ, ಆರೋಪಿತರ ಹೆಸರಿನಲ್ಲಿರುವ 8 ಎಕರೆ ಜಮೀನು ನಮ್ಮ ಕಬ್ಜಾದಲ್ಲಿರುತ್ತದೆ, ನಾವು ಆರೋಪಿತರಿಗೆ ನಮ್ಮ ಕಬ್ಜಾದಲ್ಲಿರುವ ಜಮೀನು ಹೇಗೆ ಬೀಳಾ ಬಿದ್ದಿರುತ್ತದೆಯೋ ಹಾಗೆ ನಿಮ್ಮ ಕಬ್ಜಾದಲ್ಲಿರುವ ಜಮೀನನ್ನು ನೀವು ಸಹ ಕೂಡ ಬಿತ್ತು ಬೆಳೆ ಮಾಡಬೇಡಿ ಎಂದು ಹೇಳಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ದಿ. 28.03.2023 ರಂದು ಆರೋಪಿತರೆಲ್ಲರೂ ನಮ್ಮ ಮನೆಗೆ ಬಂದು ಚಾಸಾ-೧ ರವರಿಗೆ ಹೊಡೆದಿರುತ್ತಾರೆ, ಚಾಸಾ-೧, ೪, ೬ ರವರಿಗೆ ಹೊಡೆ ಬಡೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸಾ-೧ ರವರಿಗೆ ಆರೋಪಿ ನಂ.೨ ಬಗ್ಗಿಸಿ ಹೊಡೆದಿರುತ್ತಾನೆ, ಆರೋಪಿ

ನಂ.೬ ರವರು ಚಾಸಾ-೬ ರವರನ್ನು ಹೊಡೆದಿರುತ್ತಾರೆ, ಆರೋಪಿ ನಂ.3 ರಿಂದ 5 ರವರು ಚಾಸಾ-೪ ರವರಿಗೆ ಹೊಡೆದಿರುತ್ತಾರೆ, ಅವರ ಬಾಯಿಯಲ್ಲಿರುವ ಹಲ್ಲು ಉದುರಿರುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ನಂತರ ಪೋಲಿಸ್ ಠಾಣೆಗೆ ಹೋಗಿದ್ದೆವು, ಅಲ್ಲಿ ಆಸ್ಪತ್ರೆಗೆ ಹೋಗಿ ಎಂದು ಹೇಳಿದರು, ಆಸ್ಪತ್ರೆಗೆ ಹೋಗಿ ತೋರಿಸಿಕೊಂಡು ಬಂದು ನಂತರ ಫಿರ್ಯಾದಿಯನ್ನು ಸಲ್ಲಿಸಿರುತ್ತೇವೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

**ಮರುವಿಚಾರಣೆಃ-** ಇರುವುದಿಲ್ಲ.

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಆಳಂದ